ಉಳಿದುಕೊಂಡ' ಎಂದು ವೀಣಾ ಸಂಕಟದಿಂದ ಕಣ್ಣೀರು ಹಾಕಿದರು. ಪ್ರದೀಪನಿಗೂ ನಿವಿ ಆ ಹಂತದಲ್ಲಿ ಅನುಭವಿಸಿದ ಮೂಕ ಯಾತನೆ ನೆನೆದು ಮಿಡುಕಿದ.

'ಆಕೆ ನಿಮ್ಮ ಬಳಿ ಹೇಳಲು ಬಂದಾಗಲೆಲ್ಲಾ ನೀವು ಅದಕ್ಕೆ ಆಸ್ಪದ ಕೊಡಲಿಲ್ಲ. ಆತ ಬೇರೆ ನಿಮ್ಮ ಜೊತೆ ಇದ್ದೂ ಸೋಗಿನ ಮುಖವಾಡ ಹಾಕಿ ಸಂಭಾವಿತನಂತೆ ವರ್ತಿಸಿದ. ಒಂದು ಹಂತಕ್ಕೆ ಬೆಳೆದ ನಂತರ ಹೆಣ್ಣುಮಕ್ಕಳ ಬಗ್ಗೆ ನಾವು ಎಚ್ಚರವಿರಬೇಕು. ಅದು ಯಾರೇ ವ್ಯಕ್ತಿ ಆಗಿರಲಿ. ನಾವು ಅತಿಯಾಗಿ ನಂಬಿದವರಿಂದಲೇ ಇಂಥ ದ್ರೋಹ ಆಗುವ ಸಾಧ್ಯತೆ ಮತ್ತು ಅಪಾಯ ಹೆಚ್ಚು. ಗಂಡಾಗಲೀ ಹೆಣ್ಣಾಗಲೀ, ಮಕ್ಕಳಿಗೆ ಸರಿಯಾದ ಸ್ಪರ್ಶ ಮತ್ತು ತಪ್ಪು ಸ್ಪರ್ಶದ ಬಗ್ಗೆ ತಿಳಿವಳಿಕೆ ನೀಡಬೇಕು. ಮುಖ್ಯವಾಗಿ ನಮ್ಮ ಮಕ್ಕಳು ನಮ್ಮಲ್ಲಿಗೆ ಬಂದು ಯಾವ ವಿಷಯವನ್ನೂ ಮುಚ್ಚಿಡದೆ ವಿಶ್ವಾಸದಿಂದ ಹೇಳಿಕೊಳ್ಳುವಂಥ ವಾತಾವರಣ ಮನೆಯಲ್ಲಿ ಸೃಷ್ಟಿಯಾಗಬೇಕು, ಸ್ನೇಹಭಾವ ತೋರಿಸಬೇಕು.'

ಅರವಿಂದರಿಗೆ ಹಿಡಿಶಾಪ ಹಾಕುತ್ತಲೇ ವೀಣಾ ಕಂಬನಿ ಹರಿಸುತ್ತಾ, ಸತ್ಯವನ್ನು ಅರಗಿಸಿಕೊಳ್ಳಲಾಗದೆ ಅಲ್ಲಿ ಕುಳಿತಿರಲಾಗದೆ ಎದ್ದು ಹೋದರು.

'ಪ್ರದೀಪ್. ನೀವು ಆಗ್ರಾ ಫ್ಲೈಟ್ ಕ್ಯಾನ್ಸಲ್ ಮಾಡಿದ ದಿನ, ನಿವಿ ತನ್ನ ಮಗುವನ್ನು ಉಸಿರುಗಟ್ಟಿಸಿದ್ದನ್ನು ನೋಡಿದ ದಿನ ಒಂದು ಡೇಟ್ ಹೇಳಿದ್ದಿರಿ. ನೆನಪಿದೆಯೇ?'

'ಹೌದು, ಆ ಡೇಟ್ ಅಕ್ಟೋಬರ್...'

'ಆ ದಿನ ಯಾವುದು ಗೊತ್ತಾ? ಮೀಟೂ ಪ್ರಕರಣ ಮುನ್ನೆಲೆಗೆ ಬಂದ ದಿನ. ಬಾಲಿವುಡ್ ನಟಿಯೊಬ್ಬಳು ಯಾವುದೋ ಚಿತ್ರೀಕರಣದ ಸಂದರ್ಭದಲ್ಲಿ ನಟನೊಬ್ಬ ತನ್ನನ್ನು ಅನುಚಿತವಾಗಿ ಸ್ಪರ್ಶಿಸಿದ ಎಂದು ಟೀವಿಯಲ್ಲಿ ಹೇಳಿಕೆ ಕೊಟ್ಟ ದಿನಾಂಕ ಅದು. ಆಕೆ ಅನುಭವಿಸಿದ ಅವಮಾನ, ಮುಜುಗರವನ್ನು ಆ ನಟಿ ಧೈರ್ಯವಾಗಿ ಬಿಡಿಬಿಡಿಯಾಗಿ ಹೇಳಿಕೊಂಡಿದ್ದಳು. ಬಹುಶಃ ನಿವೇದಿತಾ ಅದನ್ನು ನೋಡಿದ್ದಾಳೆ. ಹಾಗಾಗಿ ತನ್ನ ಬಾಲ್ಯದ ಅನುಭವ ಅವಳ ಮನದ ಆಳದಲ್ಲಿದ್ದದ್ದು ಧುತ್ತೆಂದು ಹೊರಬಂದು ಕಂಗೆಡಿಸಿದೆ, ಅವಳ ತಿಳಿ ಮನವನ್ನು ಕದಡಿಸಿದೆ'.

ಪ್ರದೀಪ ಮಾತಿಲ್ಲದೆ ಕೊರಡಾಗಿ ಕುಳಿತಿದ್ದ. ನಿವಿಯ ಬಗ್ಗೆ ಹೃದಯ ಆರ್ದ್ರವಾಗಿ ಕನಿಕರವೂ, ಪ್ರೀತಿಯೂ ಮೂಡಿ ಮಾತೇ ಬಾರದೇ ಕುಳಿತ.

ನಿವಿಯ ಜೊತೆ ಮೂರು ದಿನಗಳ ಬಳಿಕ ಮತ್ತೆ ಬರಲು ತಿಳಿಸಿ ಕಳುಹಿಸಿಕೊಟ್ಟರು. ಆ ಮೂರು ದಿನಗಳಲ್ಲಿ ನಿವೇದಿತಾಳಲ್ಲಿ ಬಹಳಷ್ಟು ಧನಾತ್ಮಕ ಬದಲಾವಣೆಯನ್ನು ಪ್ರದೀಪ ಗುರುತಿಸಿದ್ದ. ಅವಳ ಬದಲಾದ ನಡವಳಿಕೆ ಅವನಲ್ಲೂ ಹರುಷವನ್ನು ತರಿಸಿತ್ತು. ಅವಳೀಗ ಪ್ರದೀಪನ ಬಳಿ ಮುಕ್ತವಾಗಿ ಮಾತನಾಡುವ ಪ್ರಯತ್ನ ಮಾಡುತ್ತಿದ್ದಳು. ನಗುತ್ತಾ ಮನೆ ಕೆಲಸದವರೊಂದಿಗೆ ಮಾತನಾಡಿಸುತ್ತಿದ್ದಳು.

ಡಾ. ರೂಪಾ ಅಂದು ಹೊಸ ಥೆರಪಿಯನ್ನು ಆರಂಭಿಸಿದ್ದರು.

## ಕಳೆದ ಸಂಚಿಕೆಯಲ್ಲಿ



ನಿವೇದಿತಾಳ ನೆನಪುಗಳ ಗಣಿಯ ಆಳಕ್ಕೆ ಇಳಿದಂತೆಲ್ಲ ಡಾ. ರೂಪಾ ಅವರಿಗೆ ಅಚ್ಚರಿಯ ಸಂಗತಿಗಳು ಎದುರಾಗತೊಡಗಿದವು. ಪ್ರದೀಪನ ಬಗ್ಗೆ ಯಾವ ಬೇಸರದ ಭಾವವೂ ಇಲ್ಲದ ನಿವೇದಿತಾ, ತನ್ನ ಗಂಡನನ್ನು ಅಪಾರವಾಗಿ ಪ್ರೀತಿಸುವುದಾಗಿ ಹೇಳಿಕೊಂಡಳು. ಅವನಿಗೆ ದ್ರೋಹ ಎಸಗುತ್ತಿರುವ ಪಾಪಪ್ರಜ್ಞೆ ಅವಳನ್ನು ಕಾಡುತ್ತಿತ್ತು. ತನ್ನ ಬಗ್ಗೆ ಗಂಡ ಕೋಪಗೊಳ್ಳಲಿ, ಶಿಕ್ಷಿಸಲಿ ಎನ್ನುವ ಕಾರಣಕ್ಕಾಗಿ ಒರಟಾಗಿ ನಡೆದುಕೊಳ್ಳುತ್ತಿದ್ದಳು. ನಿವೇದಿತಾಳ ಬಾಲ್ಯದ ಸಂಗತಿಗಳ ಬಗ್ಗೆ ತಿಳಿದುಕೊಳ್ಳಲು ಡಾ. ರೂಪಾ ಪ್ರಯತ್ನಿಸಿದಾಗ ಪರಿಸ್ಥಿತಿ ಇದ್ದಕ್ಕಿದ್ದಂತೆ ಬದಲಾಯಿತು. ನಿವೇದಿತಾಳ ಜಾಗದಲ್ಲಿ ಪಿಂಕಿ ಎನ್ನುವ ಪ್ರತಿರೋಧದ ದನಿ ಕಾಣಿಸಿಕೊಂಡಿತು. ಎರಡನೇ ಸೆಷನ್‌ನಲ್ಲಿ ಪಿಂಕಿ ತನ್ನ ಮನಸ್ಸನ್ನು ತೆರೆದುಕೊಂಡಳು. ಬಾಲ್ಯದಲ್ಲಿ ಅರವಿಂದ ಮಾಮನಿಂದ ಬಾಲಕಿ ನಿವೇದಿತಾಳ ಮೇಲೆ ಲೈಂಗಿಕ ದೌರ್ಜನ್ಯ ನಡೆದಿತ್ತು. ಮನೆಯವರೆಲ್ಲರ ಪ್ರೀತಿ–ಗೌರವಕ್ಕೆ ಪಾತ್ರನಾದ ವ್ಯಕ್ತಿ ಏಕಾಂತದಲ್ಲಿ ರಾಕ್ಷಸನಂತೆ ವರ್ತಿಸಿದ್ದ. ಆ ವರ್ತನೆ ನಿವೇದಿತಾಳನ್ನು ಗಾಸಿಗೊಳಿಸಿದ್ದಲ್ಲದೆ, ಗಂಡು ಜಾತಿಯ ಬಗೆಗೆ ಅಪನಂಬಿಕೆ ಬೆಳೆಸಿಕೊಳ್ಳಲು ಕಾರಣವಾಗಿತ್ತು. ನಿವೇದಿತಾ ತನ್ನ ಮನಸ್ಸಿನಲ್ಲಿನ ಕಹಿಯನ್ನೆಲ್ಲ ತೆಗೆದುಹಾಕಿ ಸಹಜ ಸ್ಥಿತಿಗೆ ಬರುವಂತೆ ಡಾ. ರೂಪಾ ಚಿಕಿತ್ಸೆಯ ಮೂಲಕ ಪ್ರಯತ್ನಿಸತೊಡಗಿದರು.

'ನೀನು ಹಿಂದೆ ಯಾವ ಮಾನಸಿಕ ಸ್ಥಿತಿಯನ್ನು ಹೊಂದಿದ್ದೆಯೋ, ಅದರ ಚಿಪ್ಪಿನಿಂದ ಹೊರತಂದಿದ್ದೇನೆ. ಆದರೂ ನಿನ್ನಲ್ಲಿ ಇನ್ನೂ ಬೇರೂರಿರುವ ಭಯ, ಅಪನಂಬಿಕೆಯನ್ನು ಹೋಗಲಾಡಿಸಲು ನಾನು ಆರ್ ಇ ಬಿ ಟಿ ಥೆರಪಿ, ಅಂದರೆ ರ್‍ಯಾಷನಲ್ ಇಮೋಶನಲ್ ಬಿಹೇವಿಯರ್ ಥೆರಪಿಯನ್ನು ಆರಂಭಿಸುತ್ತೇನೆ. ನಿನಗೆ ಒಂದು ಜರ್ನಲ್ ಕೊಡ್ತೀನಿ. ಅದರಲ್ಲಿ ನೀನು ನಿತ್ಯ ಎದುರಿಸುವ ಭಯ ಮತ್ತು, ಅದನ್ನು ನಿವಾರಿಸಿಕೊಂಡ ಬಗೆಯನ್ನು ಬರೆಯಬೇಕು. ಹಂತ ಹಂತವಾಗಿ ಈ ಭಯದಿಂದ ಮುಕ್ತವಾಗಿ ನೀನು ನಿನ್ನ ಜೀವನವನ್ನು ಪ್ರೀತಿಸುವ ಸ್ವಾಭಾವಿಕ ಹಂತಕ್ಕೆ ಇದು ನಿನ್ನನ್ನು ಕರೆದೊಯ್ಯುತ್ತದೆ' ಎಂದು ಒಂದು ಪುಸ್ತಕವನ್ನು ತೆಗೆದು ಅವಳೆಡೆಗೆ ಚಾಚಿದರು.

'ನಿನ್ನ ಮಗು ಈಗ ಇನ್ನೊಬ್ಬರ ಕೈಲಿರುವಾಗ ನಿನಗೆ ಮೊದಲು ಭಯ ಹುಟ್ಟಬಹುದು. ನಿನ್ನ ಹಿಂದಿನ ಅನುಭವ ನಿನ್ನಲ್ಲಿ ಇಲ್ಲ ಸಲ್ಲದ ಯೋಚನೆಗಳನ್ನು ಹುಟ್ಟು ಹಾಕಿರಬಹುದು. ಆವಾಗ ಏನು ಮಾಡಬೇಕೆಂದರೆ ನೀನು ನಿನ್ನಲ್ಲಿ ಪ್ರಶ್ನೆ ಮಾಡಿಕೊಳ್ಳಬೇಕು. ಈ ಭಯ ನಿಜಾನಾ? ನನ್ನ ಯೋಚನೆಯ ರೀತಿ ತಪ್ಪು. ನನ್ನ ಪ್ರತಿಕ್ರಿಯೆ ವಿಪರೀತವಾಗುತ್ತಿದೆಯೇ? ಹೀಗೆ ಪ್ರಶ್ನೆ ಮಾಡಿಕೊಳ್ಳುತ್ತ ನಿನ್ನನ್ನು ನೀನು ನಿಯಂತ್ರಿಸಿಕೊಳ್ಳಬೇಕು. ಎಲ್ಲರೂ ಕೆಟ್ಟವರಾಗಿರುವುದಿಲ್ಲ. ಅಲ್ವಾ? ನಿನ್ನ ಪ್ರತೀ ಹೆಜ್ಜೆಯಲ್ಲಿ ನಿನಗೆ ಒತ್ತಾಸೆಯಾಗಿ ನಿಂತಿರುವ ನಿನ್ನ ಪತಿ ಪ್ರದೀಪ ಎಷ್ಟು ಒಳ್ಳೆಯವನು ಅಲ್ವಾ? ಹೀಗೆ ನಿನ್ನ ವರ್ತನೆಯಲ್ಲಿ ತಿದ್ದುಪಡಿ ತಂದುಕೊಳ್ಳುತ್ತಾ, ಹೀಗೆ ಬದಲಾವಣೆ ಮಾಡಿಕೊಳ್ಳುತ್ತಾ ನಿನ್ನ ಮನಸ್ಸನ್ನು ಸಮರ್ಪಕವಾದ ಯೋಚನೆಗಳ ಕಡೆಗೆ ಸಾಗಿಸುತ್ತೆ. ಈ ಥೆರಪಿಗೆ ತರ್ಕಬದ್ಧ ಭಾವನಾತ್ಮಕ ನಡವಳಿಕೆ ಚಿಕಿತ್ಸೆ ಅಂತಾರೆ ಇದಕ್ಕೆ. ನಿನ್ನ ವರ್ತನೆ ಮತ್ತು ನಂಬಿಕೆಗಳನ್ನು ಧನಾತ್ಮಕವಾಗಿ ಬದಲಿಸಲು ಹಾದಿ ಮಾಡಿಕೊಡುತ್ತೆ. ಹತ್ತು ದಿನಗಳಿಗೆ ಈ ಜರ್ನಲ್ ಬರೆದು ತೆಗೆದುಕೊಂಡು ಬಾ. ಇಬ್ಬರಿಗೂ ಪ್ರೀತಿಯ ಶುಭಾಶಯಗಳು. ಹೋಗಿ ಬನ್ನಿ' ಎಂದು ಬೀಳ್ಕೊಟ್ಟರು.

ಅವರಿಗೆ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸಿ ದಂಪತಿ ಗೆಲುವಾಗಿ ಅಲ್ಲಿಂದ ಹೊರ ಬಂದರು. ಇಬ್ಬರ ಮನಸ್ಸುಗಳು ಹತ್ತಿಯಷ್ಟು ಹಗುರವಾಗಿತ್ತು. ಪ್ರದೀಪ ಕಾರಿನಲ್ಲಿ ಕುಳಿತು ಯಾರಿಗೋ ಕರೆ ಮಾಡಿದ.

'ಇವತ್ತು ಬಂದು ನೀವು ಮನೆಯ ಹಾಲ್ ಮತ್ತು ಬೆಡ್ ರೂಮ್‌ಗೆ ಅಳವಡಿಸಿದ ಸಿಸಿಟೀವಿ ತೆಗೆದುಬಿಡಿ' ಎಂದ.

ನಿವಿ ಅವನ ಮಾತು ಆಲಿಸಿ ನಕ್ಕಳು. 'ಪತಿರಾಯರಿಗೆ ನನ್ನ ಮೇಲೆ ನಂಬಿಕೆ ಬಂದ ಹಾಗಿದೆ' ಎಂದು ಕೊಂಕು ನೋಟ ಬೀರಿದಳು.

'ಹ್ಞೂಂ. ಸಿಸಿಟೀವಿ ತೆಗೆದ್ರೆ ಸೇಫು. ನಿಧಿಗೆ ಅರ್ಜೆಂಟಾಗಿ ಒಂದು ತಮ್ಮಾನೋ ತಂಗೀನೋ ತರಬೇಕು' ಎಂದು ಕಣ್ಣು ಮಿಟುಕಿಸಿ ತುಂಟ ನಗೆ ನಕ್ಕಾಗ, ನಿವಿ ಹುಸಿ ಮುನಿದು ಅವನ ತೋಳಿಗೆ ಮೃದುವಾಗಿ ಗುದ್ದಿದಳು. ಅಲ್ಲಿಂದ ಹೊರಟಾಗ ಇಬ್ಬರ ಮನಸ್ಸೂ ತಿಳಿಯಾಗಿತ್ತು. ಅದನ್ನು ತಮ್ಮ ಕೋಣೆಯ ಕಿಟಕಿಯಿಂದ ನೋಡುತ್ತಿದ್ದ ಡಾ. ರೂಪಾರ ಮುಖದಲ್ಲಿ ಸಾರ್ಥಕತೆಯ ಭಾವ ಮೂಡಿತು.

(ಮುಗಿಯಿತು)

ಪ್ರತಿಕ್ರಿಯಿಸಿ: feedback@sudha.co.in